ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ನೀವು ಆಡಳಿತಪಕ್ಷದ ಜೊತೆಯಲ್ಲಿ ಮುಖ್ಯಮಂತ್ರಿಗಳ ಜೊತೆಯಲ್ಲಿ ಶಾಮೀಲಾಗಿದ್ದೀರಿ ಎನ್ನತಕ್ಕಂಥ ಮಾತನ್ನು ಸಹ ನಮಗೆ ಜನರು ಹೇಳುತ್ತಾರೆ, ಅದಕ್ಕಾಗಿ ಹೋರಾಟ ಮಾಡಬೇಕಾಗುತ್ತದೆ. ಆ ಕಾರಣದಿಂದ ನಾವು ಏನು ನ್ಯಾಯಾಂಗತನಿಖೆಯನ್ನು ಕೇಳಿದ್ದೇವೆ, ಆ ನ್ಯಾಯಾಂಗ ತನಿಖೆಯನ್ನು ಮಾಡಲು ಸರ್ಕಾರದವರು ನಮ್ಮ ಜೊತೆಯಲ್ಲಿ ಏನು ಮಾತುಕತೆ ಮಾಡಬೇಕಾಗಿಲ್ಲ. ಮುಖ್ಯಮಂತ್ರಿಗಳು ಏಕೆ ಹಿಂದುಮುಂದು ನೋಡುತ್ತಿದ್ದಾರೆ? ಈಗ ಎಷ್ಟು ನ್ಯಾಯಾಂಗ ತನಿಖೆಗಳನ್ನು ನಾವು ಮಾಡಿಲ್ಲ. ಹಾಗಾದರೆ ಪೋಲೀಸಿನವರೆಲ್ಲಾ ಡೀ ಮಾರಲೈಜ್ ಆಗಿ ಹೋಗಿಬಿಟ್ಟಿದ್ದರ ಆ ಸಂದರ್ಭದಲ್ಲಿ. ಒಂದು ನ್ಯಾಯಾಂಗ ತನಿಖೆ ಬಗ್ಗೆ ನೀವು ಪ್ರಿಸ್ಟೀಜ್ ಇಶ್ಯೂ ಏಕೆ ಮಾಡಿಕೊಳ್ಳಬೇಕು ಹೇಳಿ. ಇದು ನಮಗೂ ಸಹ ಅರ್ಥವಾಗುತ್ತಿಲ್ಲ. ಇದನ್ನು ನಾವು ಪ್ರತಿಭಟನೆ ಮಾಡುತ್ತಿದ್ದೇವೆ. ಯಾವುದೇ ಕಾರಣದಿಂದಲೂ ಸಹ ಇದರಿಂದ ನಾವು ಹಿಂದೆ ಸರಿಯತಕ್ಕಂಥ ಪ್ರಶ್ನೆ ಬರುವುದಿಲ್ಲ. ತಾವು ನಮ್ಮ ವಿರೋಧಪಕ್ಷದ ನಾಯಕರುಗಳನ್ನು ಮತ್ತು ಸದಸ್ಯರನ್ನು ಸಹ ಹೊರಗಡೆ ಎತ್ತಿ ಹಾಕಿಸಿದ್ದೀರಿ? ಬಹುಶಃ ಕಳೆದ 5 ವರ್ಷಗಳ ನಮ್ಮ ವಿಧಾನಸಭೆಯ ಇತಿಹಾಸದಲ್ಲಿ ಇಂತಹ ಘಟನೆ ನಡೆದಿರತಕ್ಕಂಥಾದ್ದು ಇಲ್ಲ. ನಮ್ಮ ನಾಯಕರಾಗಿರತಕ್ಕಂಥ ಮಾನ್ಯ ರಾಮಕೃಷ್ಣ ಹೆಗಡೆಯವರು ಇವತ್ತು ಇದರ ಬಗ್ಗೆ ಮಾತನಾಡಬೇಕಾಗಿತ್ತು. ಆದರೆ ಇವತ್ತು ಅವರ ತಾಯಿಗೆ ಹುಷಾರು ಇಲ್ಲದೆ ಆಸ್ಪತ್ರೆಯಲ್ಲಿದ್ದಾರೆ. ಆದ್ದರಿಂದ ಅವರು ಅಧಿವೇಶನಕ್ಕೆ ಬಂದಿಲ್ಲ. ಆದರೆ ಒಂದು ಮಾತು ಮಾತ್ರ ಹೇಳುತ್ತಿದ್ದೇನೆ, ಮಾನ್ಯ ರಾಮಕೃಷ್ಣ ಹೆಗಡೆಯವರು ಇದನ್ನು ಪ್ರತಿಭಟನೆ ಮಾಡಿ ನ್ಯಾಯಾಂಗ ತನಿಖೆಯನ್ನು ಮಾಡಬೇಕು ಅಂತ ಹೇಳಿ ಬಹಳ ಒತ್ತಾಯ ಮಾಡಿದಾಗ ಅವರ ಮಾತಿಗೂ ಸಹ ನೀವು ಬೆಲೆ ಕೊಡಲಿಲ್ಲ. ನಮಗೇನೋ ಅರ್ಥವಾಗುತ್ತಿಲ್ಲ. ಸರ್ಕಾರ ಇಷ್ಟೊಂದು ಬಿಗಿ ಧೋರಣೆಯನ್ನು ಇದು ಒಂದು ಪ್ರಿಸ್ಟೀಜ್ ಇಶ್ಯೂ ಅಂತ ಹೇಳಿ ತೆಗೆದುಕೊಂಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಅಥವಾ ಅವರ ಸಚಿವ ಸಂಪುಟದ ಸದಸ್ಯರುಗಳು ಏಕೆ ಈ ರೀತಿ ಮಾಡಿಕೊಂಡಿದ್ದಾರೆಂದು ನನಗಂತೂ ಅರ್ಥವಾಗುತ್ತಿಲ್ಲ. ಆದ್ದರಿಂದ ನಾವು ಇದನ್ನು ವಿರೋಧ ಮಾಡುತ್ತಿದ್ದೇವೆ. ಈ ಬಗ್ಗೆ ಸರ್ಕಾರದವರು ನ್ಯಾಯಾಂಗ ತನಿಖೆಯನ್ನು ಮಾಡಲೇಬೇಕು ಎನ್ನುವುದನ್ನು ಒತ್ತಾಯ ಮಾಡಿ ನಾವು ಇವತ್ತು ನಮ್ಮ ಧರಣಿಯನ್ನು ಮುಂದುವರಿಸುತ್ತಿದ್ದೇವೆ;

(ಜನತಾ ದಳದ ಸದಸ್ಯರು ಧರಣಿ ಪ್ರಾರಂಭ ಮಾಡಿದರು.)

+ಶ್ರೀ ಬಸವರಾಜಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಉಪ ನಾಯಕರು ಹೇಳಿದ ಹಾಗೆ ನಮ್ಮ ಜನತಾ ದಳದ ಎಲ್ಲಾ ಸದಸ್ಯರನ್ನು ತಾವು ಸಸ್ಪೆಂಡ್ ತಾವು ಸಸ್ಪಂಡ್ ಮಾಡಿದ್ದೀರಿ. ಇದು ಕಾನೂನು ಬಾಹಿರವಾದಂತಾದ್ದು. ಪ್ರಜಾಪ್ರಭುತ್ವದ ಒಂದು ಪದ್ಧತಿಯಲ್ಲಿ ವಿರೋಧಪಕ್ಷ ಇರಲೇಬೇಕು. ವಿರೋಧಪಕ್ಷದವರು ಏನಾದರೂ ಕೇಳಿದರೆ ಸರ್ಕಾರದವರು ಅದಕ್ಕೆ ಒಂದು ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಬೇಕು. ಇವತ್ತು ನಾವು ಇಲ್ಲಿ ಹೇಳುತ್ತಿರುವುದು ಒಂದು ನ್ಯಾಯಾಂಗ ತನಿಖೆ ಆಗಲೇಬೇಕು ಅಂತ. ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಕಾನೂನು ಬಾಹಿರವಾದಂತಹ ಕಾನೂನುಗಳನ್ನು ಮಾಡಿಕೊಂಡು ಜನರಿಗೆ ಮೋಸ ಮಾಡಿದ್ದಾರೆ, ಈ ಸರ್ಕಾರದವರು. ಇವತ್ತು ಸರ್ಕಾರದ ಮುಂದೆ ನಮ್ಮ ಬೇಡಿಕೆ ಏನಿದೆ ಅಂದರೆ ನ್ಯಾಯಾಂಗ ತನಿಖೆ ಆಗಬೇಕು ಎಂದು. ಗ್ರಾಮಪಂಚಾಯತಿ ಚುನಾವಣೆಯಲ್ಲಿ ಸರ್ಕಾರದವರು ಸಾಕಷ್ಟು ಕೈವಾಡ ಎಸೆಗಿದ್ದಾರೆ. ಗ್ರಾಮಪಂಚಾಯತಿಗಳಲ್ಲಿ ನಮಗೆ ಸಾಕಷ್ಟು ತೊಂದರೆ ಕೊಟ್ಟಿದ್ದಾರೆ. ರೂಲಿಂಗ್ ಪಾರ್ಟಿಯವರು ಸಾಕಷ್ಟು ಸವಿಸ್ತಾರವಾದಂತಹ ಉಪಯೋಗವನ್ನು ತೆಗೆದುಕೊಂಡಿದ್ದಾರೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಈ ದಿಸೆಯಲ್ಲಿ ನಮ್ಮ